ತೆಗೆದುಕೊಳ್ಳುವಂತೆ ವಿನಂತಿಸಿಕೊಳ್ಳುತ್ತಿದ್ದಳು. ಮಧ್ಯಾಹ್ನದ ವೇಳೆಗೆ ಎಲ್ಲವೂ ಖರ್ಚಾಗಿ ಮತ್ತಷ್ಟು ಕೊಂಡುಕೊಂಡು ಸಂಜೆವರೆಗೂ ಮಾರಾಟ ಮಾಡಿದಳು. ನಿನ್ನೆಗಿಂತ ಹೆಚ್ಚು ಹಣ ಇವತ್ತು ಅವಳಲ್ಲಿ ಉಳಿದಾಗ ದುಡಿದು ಗಳಿಸುವ ಛಲಕ್ಕೆ ಇಂಬು ಕೊಟ್ಟಂತಾಯಿತು. ಆದರೆ ಈ ನೀರಿನ ಬಾಟಲಿ ಮತ್ತು ಚಿಪ್ಸಿನಿಂದ ಬದುಕುವಷ್ಟು ಗಳಿಕೆ ಸಾಧ್ಯವಿಲ್ಲ ಅನ್ನುವ ಸತ್ಯ ಗೊತ್ತಿದ್ದರಿಂದ ಇನ್ನೇನಾದರೂ ಮಾಡಬೇಕು ಅನ್ನೋ ಆಲೋಚನೆ ಅವಳಲ್ಲಿ ಹುಟ್ಟು ಹಾಕಿತು. ಏನು ಮಾಡಬಹುದು ಅನ್ನೋ ಚಿಂತನೆಯಲ್ಲಿರುವಾಗಲೇ ಒಂದು ಯೋಚನೆ ಬಂತು. ತಳ್ಳೋ ಗಾಡಿ ಅಂಗಡಿಯಲ್ಲಿ ಊಟ ಮಾಡುವಾಗ, ಊಟದ ಸಮಯದಲ್ಲಿ ಜನ ನಿಂತುಕೊಂಡೇ ತಿನ್ನುತ್ತಿರುವುದನ್ನು ನೋಡಿ ಇಲ್ಲಿ ಇನ್ನೊಂದು ಹೋಟೆಲ್ ಹಾಕಿದರೆ ಖಂಡಿತಾ ನಡೆಯಬಹುದು ಅಂತ ಆ ಕ್ಷಣಕ್ಕೆ ಅನ್ನಿಸಿ ಕಾರ್ಯರೂಪಕ್ಕೆ ಇಳಿಸಲು ಸಿದ್ಧವಾಗಿಬಿಟ್ಟಳು. ಗೆಳತಿಯರು ಬರುವ ತನಕ ಟೈಮ್ ಪಾಸ್ ಮಾಡುವ ಬದಲು ಎಲ್ಲಿ ಹೋಟೆಲ್ ಮಾಡಬಹುದು ಅಂತ ಜಾಗ ಹುಡುಕಲು ಅಲ್ಲಿ ಸುತ್ತಾಡಿದಳು. ಆ ಕಡೆ ತುದಿಯಲ್ಲಿ ಬೀಗ ಹಾಕಿದ ಉದ್ದನೆಯ ಗೋಡೌನ್ ತರದ್ದು ನೋಡಿ ಪಕ್ಕದಲ್ಲಿ ವಿಚಾರಿಸಿದಳು. ಅದು ಪಕ್ಕದ ಹಳ್ಳಿಯದವರದಾಗಿದ್ದು, ಬಾಡಿಗೆ ಕೊಡಲೆಂದೇ ಕಟ್ಟಿದ್ದು, ಆದರೆ ಇದುವರೆಗೂ ಯಾರೂ ಬಾಡಿಗೆಗೆ ಬಂದಿಲ್ಲ ಅಂತ ತಿಳಿಸಿದಾಗ ಅವರ ಫೋನ್ ನಂಬರ್ ಇದ್ದರೆ ಕೊಡಿ ಅಂತ ಪಡೆದು ಅವರಿಗೆ ಫೋನ್ ಮಾಡಿದಳು. ನಾಳೆ ಬೆಳಿಗ್ಗೆ ಬಂದು ಬೀಗ ತೆರೆದು ತೋರಿಸುವುದಾಗಿ ಹೇಳಿದಾಗ ಮೊದಲ ಹೆಜ್ಜೆ ಊರುವ ಧೈರ್ಯ ಮೊಳೆತು ಗೆಲುವಾದಳು.

ಗೆಳತಿಯರು ಒಬ್ಬೊಬ್ಬರಾಗಿ ಬರತೊಡಗಿದಾಗ ಅವರೊಂದಿಗೆ ಮನೆಯತ್ತ ಹೆಜ್ಜೆ ಹಾಕಿದಳು. ಮನೆಯಲ್ಲಿ ಅಂಬಿಕ, ಪಂಕಜ ಅಲ್ಲಿದ್ದ ಅಷ್ಟೂ ಜನಕ್ಕೆ ಸರಸರನೇ ಅಡುಗೆ ಮಾಡುವುದನ್ನೇ ನೋಡಿದಳು. ನಿನ್ನೆ ಇವರೇ ಅಡುಗೆ ಮಾಡಿದ್ದರೂ ಗಮನಿಸಿರಲಿಲ್ಲ. ಇವತ್ತೂ ಆಸಕ್ತಿಯಿಂದ ನೋಡಿದಾಗ ಇಬ್ಬರೇ ಸೇರಿಕೊಂಡು ಅಡುಗೆ ಮಾಡುತ್ತಿರುವುದನ್ನು ನೋಡಿ ನೆರವು ನೀಡುವ ನೆವದಲ್ಲಿ 'ಅಕ್ಕ, ಇಷ್ಟು ಜನಕ್ಕೆ ನೀವೇ ಅಡುಗೆ ಮಾಡುತ್ತೀರಲ್ಲ, ಕಷ್ಟವಾಗುವುದಿಲ್ಲವೇ?' ಅಂತ ಕೇಳಿದಳು. 'ಕಷ್ಟ ಯಾಕೆ? ನಮ್ಮ ವಂಶವೇ ಅಡುಗೆ ಮಾಡುವ ವಂಶ. ನಮ್ಮ ಅಪ್ಪ, ಅಜ್ಜ ಎಲ್ಲರೂ ಸಮಾರಂಭಗಳಿಗೆ ಅಡುಗೆ ಮಾಡೋರು. ನಾನೂ ಹೀಗಾಗದಿದ್ದರೆ ದೊಡ್ಡ ಅಡುಗೆ ಕಂಟ್ರಾಕ್ಟರ್ ಆಗಿರುತ್ತಿದ್ದೆ' ಅಂತ ಹೇಳಿದಾಗ ಹೌದಾ ಅಂತ ಅಂದಿದ್ದಳು. ಅದು ಉಪಯೋಗಕ್ಕೆ ಬರಬಹುದು ಅಂತ ಈಗ ಅನ್ನಿಸತೊಡಗಿತು.

ಅಂಗಡಿಯ ಬಳಿ ಹೋಗಿ ಸುತ್ತಲೂ ಅವಲೋಕಿಸಿದಳು. ಅಲ್ಲಿ ಯಾವುದು ಮಾರಾಟವಾಗದೆ ಇರುವ ವಸ್ತುವಿನ ಅಂಗಡಿ ಯಾವುದು ಅಂತ ಸೂಕ್ಷ್ಮವಾಗಿ ಪರಿಶೀಲಿಸಿದಳು. ಇಲ್ಲಿ ಒಂದು ಪುಟ್ಟದಾಗಿ ಗಾರ್ಮೆಂಟ್ಸ್ ಪ್ರಾರಂಭ ಮಾಡಬಹುದು ಅಂತ ಆ ತಕ್ಷಣಕ್ಕೆ ಅನ್ನಿಸಿತು. ಅಂಗಡಿಯ ಮಾಲೀಕರು ಬಂದು ಅಂಗಡಿಯ ಬಾಗಿಲು ತೆರೆದು ತೋರಿಸಿದಾಗ ಗಾರ್ಮೆಂಟ್ಸ್ ಮಾಡಲು ಅಡ್ಡಿಯಿಲ್ಲ ಅನಿಸಿ ಬಾಡಿಗೆ ಅಡ್ವಾನ್ಸ್ ಬಗ್ಗೆ ಕೇಳಿದಳು. ಅವರು ಹೇಳಿದ್ದು ಹೆಚ್ಚೇನೂ ಅನಿಸದೆ ಟೋಕನ್ ಅಡ್ವಾನ್ಸ್ ಕೊಟ್ಟು ಬಿಟ್ಟಳು. ವರ್ಷಾನುಗಟ್ಟಲೆ ಬಾಡಿಗೆ ಇಲ್ಲದೆ ಇದ್ದ ಈ ಮಳಿಗೆಗೆ ಬಾಡಿಗೆ ಹೆಚ್ಚು ಹೇಳಿದರೆ ಒಪ್ಪುತ್ತಾರೊ ಇಲ್ಲವೊ ಅಂತ ಕಡಿಮೆಯೇ ಬಾಡಿಗೆ ಅಡ್ವಾನ್ಸ್ ಹೇಳಿದ್ದು ಒಳ್ಳೆಯದಾಯಿತೆಂದು ಅಂಗಡಿಯವ ಹಿಗ್ಗಿದ. ಸದ್ಯ ಅಂಗಡಿಗೆ ಕೊನೆಗೂ ಬಾಡಿಗೆದಾರರು ಬಂದರಲ್ಲ ಅನ್ನೊ ಖುಷಿಗೆ ಹಿಂದೆ ಮುಂದೆ ವಿಚಾರಿಸದೆ, ಮಂಗಳಮುಖಿ ಅಂತ ಗೊತ್ತಾದರೂ ಬಾಡಿಗೆ ಬಂದರೆ ಸಾಕೆಂದು ಅಂದುಕೊಂಡ. ನಾಳೇನೆ ಅಂಗಡಿಯ ಒಳಗೆಲ್ಲ ಕ್ಲೀನ್ ಮಾಡಿಸಿಕೊಡುವುದಾಗಿ ಹೇಳಿ ಅಂಗಡಿಯ ಕೀ ಕೊಟ್ಟು ಬಿಟ್ಟಾಗ ತನ್ನ ಕನಸಿಗೆ ಇಷ್ಟು ಬೇಗ ಸಾಕಾರ ಸಿಕ್ಕಿತಲ್ಲ ಅಂತ ವರ್ಷ ಹಿಗ್ಗಿದಳು.

ಸಂಜೆ ಮನೆಗೆ ಎಲ್ಲರೂ ಮನೆಗೆ ಬಂದಾದ ಮೇಲೆ ತನ್ನ ಯೋಜನೆಯನ್ನು ಅವರ ಮುಂದೆ ಇಟ್ಟಾಗ ಎಲ್ಲರೂ ನಕ್ಕರು. ಆದರೆ ಅಂಬಿಕ ಮಾತ್ರ ನಗದೆ, 'ನಿನ್ನ ಯೋಜನೆಯೇನೊ ಚೆನ್ನಾಗಿದೆ. ಆದರೆ ಇದಕ್ಕೆ ಬಂಡವಾಳ ಇದೆಯಾ, ನಿನಗೆ ಅಂಗಡಿ ಮಳಿಗೆ ಯಾರು ಬಾಡಿಗೆಗೆ ಕೊಡುತ್ತಾರೆ? ನಾವು ಹೊಲಿದ ಬಟ್ಟೆ ಯಾರು ಕೊಳ್ಳುತ್ತಾರೆ? ನೀನಂದುಕೊಂಡಷ್ಟು ಸುಲಭ ಅಲ್ಲ ಇದು. ನಾನು ಇಷ್ಟಪಟ್ಟು ಟೈಲರಿಂಗ್ ಕಲಿತು ಚೆನ್ನಾಗಿ ಬಟ್ಟೆ ಹೊಲಿಯುತ್ತಿದ್ದೆ. ನಾನು ಹೊಲಿದ ಬಟ್ಟೇನ ನಮ್ಮ ಓನರ್ ತಾನೇ ಹೊಲಿದಿದ್ದು ಅಂತ ಹೆಸರು ತಗೊಂಡು ಚೆನ್ನಾಗಿ ದುಡ್ಡು ಮಾಡ್ತಿದ್ದ. ನನಗೆ ಆರು ಕಾಸು ಮೂರು ಕಾಸು ಕೊಟ್ಟು ಬಾಯಿಮುಚ್ಚಿಸುತ್ತಿದ್ದ. ಕೊನೆಗೆ ಬೇಸತ್ತು ಅವನ ಅಂಗಡಿಯಿಂದ ಹೊರಗೆ ಬಂದು ಅಂಗಡಿ ಮಾಡಿದೆ. ನಾನು ಮಂಗಳಮುಖಿ ಅಂತ ನನ್ನ ಹತ್ತಿರ ಯಾರೂ ಬಟ್ಟೆ ಹೊಲಿಸಿಕೊಳ್ಳೋಕೆ ಬರಲೇ ಇಲ್ಲ. ಅಂಗಡಿ ಮುಚ್ಚಿ ಇಲ್ಲಿಗೆ ಬಂದು ಸೇರಿಕೊಂಡೆ' ಎಂದು ಅಂಬಿಕ ಹಾಗೆ ಹೇಳಿದ ಕೂಡಲೆ ವರ್ಷಳಿಗೆ ತುಂಬಾ ಖುಷಿಯಾಯಿತು. ಅದೇ ಖುಷಿಯಿಂದ 'ಅಕ್ಕ ನಿನಗೆ ಟೈಲರಿಂಗ್ ಬರುತ್ತಾ, ಹಾಗಾದ್ರೆ ಇನ್ನೂ ಒಳ್ಳೆಯದೇ ಆಯಿತು. ನಿನ್ನ ಜೊತೆ ಇಬ್ರು ಇದ್ರೆ ಸಾಕು. ರೆಡಿಮೇಡ್ ಬಟ್ಟೆ ಹೊಲಿದು ಬಟ್ಟೆ ಅಂಗಡಿಗಳಿಗೆ ಕೊಡೋಣ, ನೀವು ಹೊಲಿದು ಕೊಡಿ, ನಾನು ಮುಂದಿನದನ್ನು ನೋಡಿಕೊಳ್ಳುತ್ತೇನೆ. ಅಂಗಡಿ ಬಾಡಿಗೆಗೆ ಸಿಕ್ಕಿದೆ. ಕಷ್ಟ ಆದ್ರೂ ಪರ್ವಾಗಿಲ್ಲ ಪ್ರಯತ್ನಪಡೋಣ. ದೇವರ ಮೇಲೆ ಭಾರ ಹಾಕಿ ಮುಂದುವರೆಯೋಣ... ಮತ್ತೊಂದು ಆಲೋಚನೆ ಕೂಡಾ ಇದೆ. ಹೇಗೂ ನೀವು ಚೆನ್ನಾಗಿ ಅಡುಗೆ ಮಾಡ್ತೀರಾ, ಒಂದು ತಳ್ಳೋ ಗಾಡಿಯಲ್ಲಿ ಕ್ಯಾಂಟೀನ್ ಮಾಡೋಣ. ಚೆನ್ನಾಗಿ ಆಗುತ್ತೆ ಅಂದ್ರೆ ಒಂದು ಮಳಿಗೆ ಬಾಡಿಗೆ ತಗೊಂಡು ಹೋಟೆಲ್ ಮಾಡೋಣ. ದುಡಿದು ತಿನ್ನೋಣ. ಈ ಭಿಕ್ಷೆ ಬೇಡೋದು, ಸೆರಗು ಹಾಸೋದು ಬಿಟ್ಟು ಬಿಡೋಣ. ಮರ್ಯಾದೆಯಾಗಿ ಬದುಕೋಣ. ಜನ ನಿಧಾನವಾಗಿ ನಮ್ಮನ್ನ ಒಪ್ಪೋಬಹುದು. ನನ್ನ ಅನುಭವದಿಂದ ಹೇಳ್ತಾ ಇದ್ದೀನಿ. ಜನ ಎಲ್ಲರೂ ಕೆಟ್ಟವರಲ್ಲ. ನಾವೆಲ್ಲರೂ ಪ್ರಯತ್ನಿಸಿದರೆ ನಮಗೂ ಈ ಸಮಾಜದಲ್ಲಿ ಒಂದು ಸ್ಥಾನ ಸಿಗುವಂತೆ ಮಾಡಬಹುದು. ಮುಂದಿನ ನಮ್ಮ ಪೀಳಿಗೆಯವರಿಗೆ ಸರಿಯಾದ ಮಾರ್ಗ ಹಾಕಿಕೊಡಬಹುದು. ನಾವೇನು ಈ ರೀತಿ ಹುಟ್ಟಬೇಕೆಂದು ಬಯಸಿದ್ದೆವಾ? ಹುಟ್ಟಿದ್ದೇವೆ, ಧೈರ್ಯವಾಗಿ, ಸರಿಯಾದ ಮಾರ್ಗದಲ್ಲಿ ನಡೆದು ತೋರಿಸೋಣ. ನಮ್ಮನ್ನು ನೋಡಿಯಾದರೂ ನಮ್ಮಂಥವರು ಹುಟ್ಟಿದರೆ ಹೆತ್ತವರು, ನೆರೆಹೊರೆಯವರು, ಈ ಸಮಾಜ ತಿರಸ್ಕಾರಪಡದೆ, ನೋವು ಅನುಭವಿಸದೆ ಸಾಮಾನ್ಯ ಮಗುವನ್ನು ಬೆಳೆಸುವಂತೆ ಬೆಳೆಸಲಿ. ನಮ್ಮದಲ್ಲದ ತಪ್ಪಿಗೆ ನಾವು ಶಿಕ್ಷೆ ಅನುಭವಿಸುವುದು ತಪ್ಪಲಿ. ನಾವು ಚೆನ್ನಾಗಿ ದುಡಿದು ನಮ್ಮವರಿಗಾಗಿ ಆಶ್ರಮ ಕಟ್ಟೋಣ, ಅಲ್ಲಿ ಅವರು ನೆಮ್ಮದಿಯಾಗಿ ತಮಗಿಷ್ಟ ಬಂದದ್ದನ್ನು ಓದಲಿ, ಓದಿ ಒಳ್ಳೆಯ ಕೆಲಸವನ್ನು ಪಡೆದುಕೊಳ್ಳಲಿ. ಓದಲು ಆಗದವರು ತಮಗಿಷ್ಟ ಬಂದ ಕೆಲಸವನ್ನು ಕಲಿಯಲಿ. ಅವರಿಗೆ ಸ್ವಂತ ಕಾಲ ಮೇಲೆ ನಿಲ್ಲಲು ಸಹಾಯ ಮಾಡೋಣ. ವಯಸ್ಸಾದವರನ್ನು ಆಶ್ರಮದಲ್ಲಿ ನೆಮ್ಮದಿಯಿಂದ ತಮ್ಮ ಕೊನೆಗಾಲವನ್ನು ಕಳೆಯುವಂತೆ ನೋಡಿಕೊಳ್ಳೋಣ. ನಮ್ಮ ಜನರಿಗೆ ಜಾಗೃತಿ ಮೂಡಿಸೋಣ. ಸಮಾಜ ನಾವು ಹೇಗಿದ್ದೆವೋ ಹಾಗೆ ಒಪ್ಪಿಕೊಳ್ಳುವಂತೆ ಪ್ರಯತ್ನ ನಡೆಸೋಣ. ನಮ್ಮ ನಮ್ಮ ಮನೆಯಲ್ಲಿ ನಮಗೆ ಮಗಳ ಸ್ಥಾನ ಸಿಗುವಂತೆ ಹೋರಾಟ ಮಾಡೋಣ. ಶಿಕ್ಷಣದಲ್ಲಿ ಅವಕಾಶ, ಆಸ್ತಿಯ ಹಕ್ಕು, ಉದ್ಯೋಗಗಳಲ್ಲಿ ಮೀಸಲಾತಿ... ಹೀಗೆ ಎಲ್ಲವೂ ಸಿಗುವಂತೆ ಹೋರಾಟ ಮಾಡೋಣ. ಬನ್ನಿ ಸಹೋದರಿಯರೆ ನನ್ನ ಜೊತೆ ಕೈ ಜೋಡಿಸಿ. ನೀವು ನೆಮ್ಮದಿಯಿಂದ ಬದುಕಿ ಇತರರನ್ನು ನೆಮ್ಮದಿಯಿಂದ ಬದುಕಲು ಅವಕಾಶ ಕಲ್ಪಿಸಿ ಕೊಡಿ' ಅಂತ ವರ್ಷ ಬೇಡಿಕೊಂಡಳು.

ಅಲ್ಲಿದ್ದ ಕೆಲವರಿಗಾದರೂ ಅವಳ ಮಾತುಗಳು ಹೃದಯಕ್ಕಿಳಿದು ಒಪ್ಪುವಂತೆ ಮಾಡಿತು. ಮುಂದಿನ ದಾರಿ ಕಷ್ಟವಾದರೂ ಸ್ವಾವಲಂಬನೆಯ ಬದುಕು, ನೆಮ್ಮದಿಯ ಬಯಕೆ ಆ ಕಷ್ಟವನ್ನು ಸಹಿಸಿ ಭದ್ರವಾಗಿ ಹೆಜ್ಜೆಗಳನ್ನು ಊರಲು ನಿರ್ಧಾರ ತೆಗೆದುಕೊಳ್ಳಲು ತೀರ್ಮಾನಿಸಿದರು. ಆದರೆ ಕೆಲವರು ಮಾತ್ರ ಈಗಾಗಲೇ ಒಗ್ಗಿಹೋಗಿದ್ದ ಬದುಕನ್ನು ಬದಲಿಸಿಕೊಳ್ಳಲು ಒಪ್ಪಲಿಲ್ಲ. ಅವರನ್ನು ವರ್ಷ ಬಲವಂತ ಮಾಡಲೂ ಇಲ್ಲ. ಇವತ್ತಲ್ಲ ನಾಳೆ ನಮ್ಮತ್ತ ಬಂದೇ ಬರುತ್ತಾರೆ ಅನ್ನೋ ಭರವಸೆ ಕಳೆದುಕೊಳ್ಳದೆ ತನ್ನ ಮುಂದಿನ ದಾರಿಯತ್ತ ನಡೆಯಲು ದೃಢವಾದ ನಿರ್ಧಾರ ಕೈಗೊಳ್ಳುವತ್ತ ಅನುವಾದಳು.

ಕ್ಯಾಂಟೀನ್ ನಡೆಸೋಕೆ ಚಂದ್ರಿಕ, ತರಾನ, ಚೇತನ ಮುಂದೆ ಬಂದರು. ಭಿಕ್ಷೆ ಬೇಡುತ್ತಿದ್ದ ಇವರು ವರ್ಷಳ ಮಾತುಗಳಿಂದ ಪ್ರೇರಿತರಾದರು. ಅಂಬಿಕ ಅಡುಗೆ ಮಾಡಿಕೊಡುವುದಾಗಿ ಒಪ್ಪಿಕೊಂಡರು. ಮನೆಯಲ್ಲಿಯೇ ಉಪ್ಪಿಟ್ಟು, ಕೇಸರಿಬಾತು, ಅವಲಕ್ಕಿ ತಯಾರಿಸಿ ಬಸ್‌ಸ್ಟಾಂಡಲ್ಲಿ ತಳ್ಳೋ ಗಾಡಿಯಲ್ಲಿ ಇಟ್ಟು ಮಾರಲು ನಿರ್ಧರಿಸಿದರು. ಅದರಂತೆ ಅದಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು